ಏನನ್ನೂ ತೋರಿಸಿಕೊಳ್ಳದೆ, ಒಂದಿಷ್ಟೂ ಸದ್ದು ಮಾಡದೆ ಇಲಿಗಳ ಹಾಗಿರುತ್ತಾರೆ, ಖಿನ್ನರಾಗಿ.' ಹೀಗೆ ಲೈಬ್ರರಿಯ ಅಂತರಂಗವನ್ನು ತೆರೆದಿಡುತ್ತಲೇ ಹೋಗುವ ಕಥೆ ಮುಗಿಯುವುದು ಹೊರಗಿನ ವಾಸ್ತವದ ಕುರಿತ ಸಾಲುಗಳ ಮೂಲಕ. 'ದೊಡ್ಡ ದೊಡ್ಡ ಕಿಟಕಿಗಳ ಹೊರಗೆ ಮೃದುವಾದ ಹಿಮ ತನ್ನ ಬಲೆ ನೇಯುತ್ತಿದೆ. ಹತ್ತಿರದಲ್ಲೇ ನೇವ್‌ಸ್ಕಿ ರಸ್ತೆಯಿದೆ. ಅಲ್ಲಿ ಸಮೃದ್ಧ ಜೀವನವಿದೆ. ದೂರದಲ್ಲಿ, ಕಾರ್ಪೇತಿಯನ್ ಬೆಟ್ಟಗಳಲ್ಲಿ ರಕ್ತ ಹರಿಯುತ್ತಿದೆ.' ಆದರೆ ಲೈಬ್ರರಿಯೊಳಗಿನ ಬದುಕು ಮಾತ್ರ ಹೊರಗಿನದೇ ಕಲ್ಪನೆಯೇನೋ ಅನ್ನುವ ಹಾಗೆ ತಣ್ಣಗೆ ಜೀವಿಸುತ್ತಿದೆ. ಯಾವುದು ನಿಜ, ಯಾವುದು ಕಾಲ್ಪನಿಕ? 'ಕಾಗದದ ಹೊತ್ತಿಗೆ' ಕಥೆಯಲ್ಲಿನ ಸಾಹಿತ್ಯ-ಮನುಷ್ಯನ ಸಂಬಂಧದ ಜಿಜ್ಞಾಸೆಯೇ ಈ ಕಥೆಯಲ್ಲಿಯೂ ಬೇರೆ ರೀತಿಯಲ್ಲಿ ಮುಂದುವರಿದಿದೆ.

ಈ ಸಂಕಲನದ ಕಥೆಗಳನ್ನು ಹೀಗೆ ಒಂದಕ್ಕೊಂದು ಜೋಡಿಸಿಕೊಂಡು ಓದುವುದರಿಂದ ಹೊಸದೇ ಹೊಳಹುಗಳು ಸಿಗುತ್ತವೆ. ಬೋರ್ಹೆಸ್‌ನ 'ಮರಳಿನ ಹೊತ್ತಿಗೆ' ಕಥೆಯೂ ಎಂದೆಂದೂ ಮುಗಿಯದ, ಒಂದು ಸಲ ಓದಿದ ಪುಟ ಮತ್ತೊಮ್ಮೆ ಸಿಕ್ಕದ ಒಂದು ನಿಗೂಢ ಪುಸ್ತಕದ ರೂಪಕದ ಮೂಲಕ ಸಾಹಿತ್ಯ ಕಟ್ಟಿಕೊಡುವ ಅದಮ್ಯ ಅನೂಹ್ಯ ಜೀವನ ಸಾಧ್ಯತೆಗಳ ಕುರಿತಾಗಿಯೇ ಹೇಳುತ್ತದೆ. ಈ ಕಥೆಯೊಂದಿಗೆ ವಿಚಿತ್ರವಾಗಿ ಸಂಬಂಧ ಸಾಧಿಸುವ ಇನ್ನೊಂದು ಕಥೆ, ಎನ್ರಿಕೆ ಯಾರಾಮಿಯೊ ಲೇವಿ ಬರೆದ 'ರಟ್ಟಿಲ್ಲದ ಪುಸ್ತಕ'. 'ಮರಳಿನ ಹೊತ್ತಿಗೆ' ಓದಿ ಮುಗಿಯದ ಹೊತ್ತಿಗೆಯಾದರೆ, ಇದು ಎಂದೆಂದೂ ಸುಟ್ಟುಹೋಗದ ಹೊತ್ತಿಗೆ. ಇತಿಹಾಸದುದ್ದಕ್ಕೂ ಬೌದ್ಧಿಕತೆಯನ್ನು ಹತ್ತಿಕ್ಕುವ ಒಂದು ವಿಧಾನವಾಗಿ ಪುಸ್ತಕ ಸುಡುವ ಪ್ರಯತ್ನಗಳನ್ನು ನೋಡುತ್ತೇವೆ. ಈ ಪುಸ್ತಕ ಹೋದಲ್ಲೆಲ್ಲ ಬೆಂಕಿ ಬೀಳುತ್ತದೆ, ಆದರೆ ಪುಸ್ತಕ ಸುಟ್ಟುಹೋಗುವುದಿಲ್ಲ!

ಹುಲಿಯೋ ಕೋರ್ತಝಾರ್‌ನ 'ನಿರಂತರ', ತಾನು ಓದತೊಡಗಿದ ಪುಸ್ತಕ ಜಗತ್ತಿನೊಳಗೆ ಸುತ್ತುತ್ತ ತನ್ನನ್ನೇ ಕಂಡುಕೊಳ್ಳುವ ವಿಚಿತ್ರ ಮಾಯಾವಾಸ್ತವವನ್ನು ತೆರೆದಿಡುತ್ತದೆ.

ಇತಾಲೊ ಕಲ್ವಿನೊ ಬರೆದ 'ಲೈಬ್ರರಿಯಲ್ಲೊಬ್ಬ ಜನರಲ್' ಕಥೆ ಹಲವು ಕಾರಣಗಳಿಗಾಗಿ ಚರ್ಚಿಸಬೇಕು ಅನಿಸುವಂಥ ಕಥೆ. ಸಾಹಿತ್ಯವನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಂಡ, ಅದಕ್ಕೆ ಮುಕ್ತ ಸ್ವಾತಂತ್ರ್ಯ ನೀಡಿದ ಪ್ರಭುತ್ವ ಬಹುಶಃ ಜಗತ್ತಿನಲ್ಲಿ ಎಲ್ಲಿಯೂ ಯಾವಾಗಲೂ ಇರಲಿಲ್ಲ. ಯಾಕೆಂದರೆ, ಸಾಹಿತ್ಯ ಯಾವಾಗಲೂ ಪ್ರಭುತ್ವದ, ಆಳ್ವಿಕೆಯ ಪೊಳ್ಳುತನವನ್ನು ಮರೆಯಲಾಗದಷ್ಟು ಗಾಢ ರೂಪಕಗಳ ಮೂಲಕ ಬಿಚ್ಚಿಡುತ್ತಲೇ ಬಂದಿದೆ. ಕಪ್ಪು-ಬಿಳುಪು ಬೈನರಿಗಳಲ್ಲಿ ಜನರನ್ನು ವಿಂಗಡಿಸುವುದರಲ್ಲಿ ಪ್ರಭುತ್ವ, ಧರ್ಮ, ಬಂಡವಾಳಶಾಹಿಗಳು ಎಲ್ಲರೂ ಒಟ್ಟಾಗಿ ಶ್ರಮಿಸುತ್ತಿರುವಾಗ, ಪುಸ್ತಕಗಳು ಆ ಬೈನರಿ ಸ್ಕ್ರೂಗಳನ್ನು ತನ್ನಷ್ಟಕ್ಕೆ ತಾನು ಗೆದ್ದಲ ಹಾಗೆ ಪೊಳ್ಳುಮಾಡಿ ಕೆಡಹುವ ಕೆಲಸ ಮಾಡುತ್ತಿರುತ್ತದೆ. ಹಲವು ಬಣ್ಣಗಳಲ್ಲಿ ಹರಡಿಕೊಂಡಿರುವ ಬದುಕಿನ ಕಾಮನಬಿಲ್ಲನ್ನು ತೋರಿಸುತ್ತ ಜನರನ್ನು ಎಚ್ಚರಿಸುತ್ತಿರುತ್ತದೆ.

ಪುಸ್ತಕಗಳು ಮಿಲಿಟರಿ ಘನತೆಗೆ ಮಾರಕವೆನಿಸುವ ಅಭಿಪ್ರಾಯಗಳನ್ನು ಒಳಗೊಂಡಿವೆಯೇ ಎನ್ನುವ ಅನುಮಾನವೊಂದು ಪಾಂದೂರಿಯಾ ಎಂಬ ಭವ್ಯ ದೇಶದ ಉನ್ನತಾಧಿಕಾರಿಗಳಿಗೆ ಬರುತ್ತದೆ. ಪಾಂದೂರಿಯಾದ ರಾಜ್ಯ ಬಜೆಟ್ ಆ ಲೈಬ್ರರಿಗೆ ಯಾವುದೇ ನೆರವು ನೀಡುತ್ತಿಲ್ಲ. ಮಿಲಿಟರಿಯ ವಿರುದ್ಧವಾದದ್ದೇನಾದರೂ ಇದೆಯೇ ಎಂಬುದನ್ನು ಹುಡುಕಲು, ಲೈಬ್ರರಿಯನ್ನು ವಶಕ್ಕೆ ಪಡೆದುಕೊಂಡು ಎಲ್ಲ ಪುಸ್ತಕಗಳನ್ನು ಓದಲು ತೊಡಗುವ ಜನರಲ್‌ಗಳು ಬೇರೆಯೇ ಲೋಕಕ್ಕೆ ಹೊಕ್ಕು, ಪೂರ್ತಿ ದಿಕ್ಕುತಪ್ಪಿ, ತಮ್ಮ ಪ್ರಭುತ್ವದ ವಿರುದ್ಧವೇ ತಾವು ಮಾತಾಡುವ, ಅದೇ ಕಾರಣಕ್ಕೆ ಸೇವೆಯಿಂದ ಅಮಾನತ್ತಾಗಿ, ಕೊನೆಗೇ ಅದೇ ಲೈಬ್ರರಿಯ ಕಾಯಂ ಓದುಗರಾಗಿಬಿಡುತ್ತಾರೆ. ಗಾಢ ರೂಪಕವಾಗಿ ಬೆಳೆಯುತ್ತ ಹೋಗುವ ಈ ಕಥೆ, ಕಥನ ಕೌಶಲದ ದೃಷ್ಟಿಯಿಂದಲೂ ಕುತೂಹಲಕಾರಿಯಾದುದು. ಒಂದು ಘೋಷವಾಕ್ಯವಾಗುವ, ಜನಪ್ರಿಯ ಸ್ಟೇಟ್‌ಮೆಂಟ್ ಆಗಿಬಿಡಬಹುದಾದ ಅಪಾಯವನ್ನು ಕಥೆಗಾರ ಹೇಗೆ ದಾಟಿಕೊಂಡಿದ್ದಾನೆ ಎಂಬುದು ಖಂಡಿತವಾಗಿಯೂ ಗಮನಿಸಬೇಕಾದ ಸಂಗತಿ. ಪುಸ್ತಕಗಳ ಕುರಿತಾದ ಕಥೆಗಳ ನಡುವೆಯೇ ತುಸು